ಬೆಂಗಳೂರು–ಮಂಗಳೂರು ಹೆದ್ದಾರಿಯ ವಿಸ್ತರಣೆ

೯೯೪. ಶ್ರೀ ಎಲ್. ಆರ್. ಶಿವರಾಮೇಗೌಡ, (ನಾಗಮಂಗಲ).—ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ವಾಹನ ಸಂಚಾರ ಅಧಿಕವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

(ಆ) ಮೇಲ್ಕಂಡ ಹೆದ್ದಾರಿಯನ್ನು ವಿಸ್ತರಿಸಲು ಸರ್ಕಾರವು ಹಾಕಿಕೊಂಡಿರುವ ಕಾರ್ಯಕ್ರಮವೇನು ?

(ಇ) ಮೇಲ್ಕಂಡ ರಸ್ತೆಯನ್ನು ಹೆಚ್ಚು ಅನುಕೂಲಗೊಳಿಸಲು ಸರ್ಕಾರವು ಈ ಆರ್ಥಿಕ ವರ್ಷದಲ್ಲಿ ಹಾಕಿಕೊಂಡ ಯೋಜನೆಯೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಗಮನಕ್ಕೆ ಬಂದಿದೆ.

(ಆ) ಬೆಂಗಳೂರು–ಮಂಗಳೂರು ಹೆದ್ದಾರಿಯ ಒಟ್ಟು ಉದ್ದವಾದ ೩೨೩ ಕಿ.ಮೀ. ರಸ್ತೆಯನ್ನು ಹಾಲಿ ಇರುವ ವಾಹನ ಸಂಚಾರದ ಒತ್ತಡವನ್ನು ಪರಿಗಣಿಸಿ, ಈ ರಸ್ತೆಯನ್ನು ದ್ವಿಪಥ ವಾಹನ ಸಂಚಾರ ರಸ್ತೆಯನ್ನಾಗಿ ವಿಸ್ತರಿಸಿ ಮಾರ್ಪಡಿಸಲಾಗಿದೆ.

(ಇ) ಪ್ರಸ್ತುತ ಆರ್ಥಿಕ ವರ್ಷದಲ್ಲಿ ಈ ರಸ್ತೆಯ ಕೆಲವು ದುರ್ಬಲ ಭಾಗಗಳನ್ನು ರೂ. ೨.೭೦ ಕೋಟಿ ಅಂದಾಜು ವೆಚ್ಚದಲ್ಲಿ ಬಲಪಡಿಸುವ ಹಾಗೂ ಅಭಿವೃದ್ಧಿಗೊಳಿಸುವ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಸಭಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಬೆಂಗಳೂರು–ಮಂಗಳೂರು ಹೆದ್ದಾರಿಯ ಉದ್ದ ತಿಳಿಸಿದ್ದಾರೆ. ಈ ರಸ್ತೆಯಲ್ಲಿ ಏನು ಅಡಚಣೆ ಇದೆ ಎಂಬ ಬಗ್ಗೆ ತಮ್ಮ ಗಮನ ಸೆಳೆದಿದ್ದೇನೆ. ಈ ಹೆದ್ದಾರಿ ಬೆಂಗಳೂರಿನಿಂದ ನೆಲಮಂಗಲದವರೆಗೆ ಒಂದೇ ಆಗಿದ್ದು, ನೆಲಮಂಗಲದ ಬಳಿ, ಪೂನಾದ ಕಡೆಗೆ ಒಂದು, ಮಂಗಳೂರು ಕಡೆಗೆ ಒಂದು ಹೆದ್ದಾರಿ ಇದೆ. ನೆಲಮಂಗಲದ ಹತ್ತಿರ ಇರುವ ಬೈಪಾಸ್ ರೋಡ್‌ನಲ್ಲಿ ಈ ಹೆದ್ದಾರಿ ತಿರುಗುವ ಕಡೆ ಒಂದು ಸರ್ಕಲ್ ಆಗಬೇಕು, ಅಲ್ಲಿ ವಾರಕ್ಕೆ ಐದಾರು ಆಕ್ಸಿಡೆಂಟ್ ಆಗಿ ಬಹಳ ಅನಾನುಕೂಲವಾಗಿದೆ. ಇಲ್ಲಿ ಒಂದು ಸರ್ಕಲ್ ಆಗಬೇಕಾದುದು ಬಹಳ ಮುಖ್ಯ ಇದನ್ನು ಜಾಗ್ರತೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಇದಾದಮೇಲೆ ಈ ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ಬೆಳ್ಳೂರು ಯಡಿಯೂರು ಮಧ್ಯೆ ಮೂರು ಸೇತುವೆಗಳ ಕೆಲಸ ಅರ್ಧಕ್ಕೆ ನಿಂತಿದೆ. ಇದನ್ನು ಶೀಘ್ರವಾಗಿ ಮುಗಿಸುವ ವ್ಯವಸ್ಥೆ ಮಾಡಬೇಕು. ಈ ಮಧ್ಯೆ ನೆಲ್ಲಿಗೆರೆ ಹತ್ತಿರ ಬಹಳ ಪುರಾತನವಾದ ಒಂದು ಸೇತುವೆ ಇದೆ. ಮಳೆ ಏನಾದರೂ ಜೋರಾಗಿ ಬಿದ್ದು ಈ ಸೇತುವೆ ಏನಾದರೂ ಕೊಚ್ಚಿ ಹೋದರೆ ಮಂಗಳೂರು ಕಡೆಗೆ ಹೋಗುವ ವಾಹನ ಸಂಚಾರ ಸ್ಥಗಿತವಾಗುತ್ತದೆ. ಇಲ್ಲ ಎಂದರೆ ನೂರಾರು ಮೈಲಿ ಸುತ್ತಿಕೊಂಡು ತುಮಕೂರು ಮೂಲಕ ಹೋಗಬೇಕಾಗುತ್ತದೆ. ಕಮ್ಯುನಿಕೇಷನ್ ಗ್ಯಾಪ್ ಆಗತಕ್ಕಂಥ ಪರಿಸ್ಥಿತಿ ಇರುವುದರಿಂದ ನೆಲ್ಲಿಗೆರೆಯಿಂದ ಬೆಳ್ಳೂರುವರೆಗಿನ ರಸ್ತೆ ಕೆಲಸ ಬೇಗ ಆಗಬೇಕು. ಈ ಸೇತುವೆ ಕೆಲಸವನ್ನು ಇನ್ನೂ ಪ್ರಾರಂಭವೇ ಮಾಡಿಲ್ಲ ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ಉಳಿಕೆ ಕೆಲಸ ಹೆಚ್ಚು ಕಡಿಮೆ ಮಾಡುತ್ತಿದ್ದೀರಿ. ಆದರೆ ನೆಲ್ಲಿಗೆರೆ, ಬೆಳ್ಳೂರು ಬಳಿ ಒಂದು ಬೈಪಾಸ್ ರೋಡ್ ಆಗಬೇಕು. ಇದು ಸ್ಯಾಂಕ್ಷನ್ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಇನ್ನೂ ಪ್ರಾರಂಭವಾಗಿಲ್ಲ. ಯಾವಾಗ ಪ್ರಾರಂಭ ಮಾಡುತ್ತೀರಿ ? ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ಮಂಡ್ಯ-ತುಮಕೂರು ಜಿಲ್ಲಾ ಹೆದ್ದಾರಿ ಕಡಬಳ್ಳಿ ಹತ್ತಿರ ಈ ರೋಡನ್ನು ಕ್ರಾಸ್ ಮಾಡುತ್ತದೆ. ಅಲ್ಲಿ ಒಂದು ಸರ್ಕಲ್ ಆಗಬೇಕು. ಅಲ್ಲಿ ಆಕ್ಸಿಡೆಂಟ್ ಆಗದಿರತಕ್ಕಂಥ ದಿವಸ ನೋಡಿಲ್ಲ. ಅಲ್ಲಿ ೨೦–೩೦ ವಾಹನಗಳು ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಓಡಾಡುತ್ತಿರತಕ್ಕಂಥ ಸಂದರ್ಭದಲ್ಲಿ, ಮೇನ್ ರೋಡಿನಲ್ಲಿ ಬಹಳ ರಭಸದಿಂದ ಹೋಗತಕ್ಕಂಥ ವಾಹನಗಳು ಜಿಲ್ಲಾ ಹೆದ್ದಾರಿಯಿಂದ ಬರುವ ವಾಹನಗಳನ್ನು ಗುದ್ದಿಕೊಂಡು ಹೋಗುತ್ತವೆ. ಆದುದರಿಂದ ಕಡಬಳ್ಳಿ ಹತ್ತಿರ ಒಂದು ಸರ್ಕಲ್ ಆಗಬೇಕು. ಬೆಳ್ಳೂರು ಕ್ರಾಸ್‌ನಲ್ಲಿ ಕೂಡ ಒಂದು ಸರ್ಕಲ್ ಆಗಬೇಕು. ಇದರ ಬಗ್ಗೆ ತಾವು ಸ್ವತಃ ಸಿಕ್ಕಿದಾಗಲೂ ಮಾತನಾಡಿದ್ದೇನೆ. ತಾವೂ ಸಹಿತ ದಿನಬೆಳಗಾದರೆ ಈ ರಸ್ತೆಯಲ್ಲಿ ತಿರುಗಾಡತಕ್ಕಂಥ ಸಂದರ್ಭ ಇರುವುದರಿಂದ ಈ ದೃಷ್ಟಿಯಿಂದಲಾದರೂ ಈ ರಸ್ತೆಗೆ ಹೆಚ್ಚು ಒತ್ತು ಕೊಡುತ್ತೀರಿ ಎಂದು ಆಶಿಸಿ, ಯಾವಾಗ ಇದನ್ನು ಪೂರ್ಣ ಮಾಡುತ್ತೀರಿ ಎಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಕೆಲಸ ಬಹಳ ಪ್ರಗತಿ ಪಥದಲ್ಲಿ ಸಾಗುತ್ತಿದೆ. ಇದಕ್ಕೆ ಹಣದ ಕೊರತೆಯಿಲ್ಲ. ಕೇಂದ್ರ ಸರಕಾರ ಈಗಾಗಲೇ ಸಾಕಷ್ಟು ಹಣ ಕೊಟ್ಟಿದೆ. ಈ ಕಾರ್ಯವನ್ನು ಕೂಡಾ ನಾವು ಎಲೆಲ್ಲಿ ಅಗತ್ಯವಾಗಿ ಆಗಬೇಕಾಗಿದೆ ಅಲ್ಲಲ್ಲಿ ಮಾಡುತ್ತಿದ್ದೇವೆ ಬೆಂಗಳೂರು–ಮಂಗಳೂರು ಹೆದ್ದಾರಿಯನ್ನು ಎರಡು ಪಥಗಳ ರಸ್ತೆಯನ್ನಾಗಿ ನಿರ್ಮಾಣ ಮಾಡಿದ್ದೇನೆ. ಅವರು ಹೇಳಿದ ಹಾಗೆ ಅಲ್ಲಿ ಒಂದು ಸರ್ಕಲ್‌ನ ಅಗತ್ಯ ಇದೆ. ಹೆಚ್ಚಾಗಿ ಅಪಘಾತಗಳು ಆಗತಕ್ಕದ್ದು ಸಹಜ. ಈಗಾಗಲೇ ಅದಕ್ಕೆ ಅಂದಾಜನ್ನು ತಯಾರು ಮಾಡಿ, ವಿನ್ಯಾಸ ಮಾಡಿ, ಕೇಂದ್ರ ಸರಕಾರದ ಅನುಮೋದನೆಗಾಗಿ ಕಳುಹಿಸಿ ಕೊಟ್ಟಿದ್ದೇವೆ. ಅಷ್ಟೇ ಅಲ್ಲ, ಇತ್ತೀಚಿನ ದಿನಗಳಲ್ಲಿ ಈ ರಸ್ತೆ ಕೆಲಸ ಬಹಳ ವೇಗವಾಗಿ ಆಗುತ್ತಿದೆ. ಇದರಷ್ಟೆ ವೇಗವಾಗಿ ನಡೆಯುತ್ತಿರುವ ಕೆಲಸ ಯಾವುದೂ ಇಲ್ಲ. ಸನ್ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಬೆಂಗಳೂರು–ಮೈಸೂರು ರಸ್ತೆ ಕೆಲಸವೂ ಆಗುತ್ತಿಲ್ಲ.ಅದು ಇನ್ನೂ ರಾಷ್ಟ್ರೀಯ ಹೆದ್ದಾರಿಯೇ ಆಗಲಿಲ್ಲ. ಆ ರಸ್ತೆ ಕೆಲಸವನ್ನೂ, ಇದನ್ನೂ ಹೋಲಿಕೆ ಮಾಡಿದರೆ ಬಹುಶಃ ಅದರ ಕೆಲಸ ಇಷ್ಟರ ಮುಂದೆ ಏನಿಲ್ಲ ಎಂದು ಹೇಳಬಹುದು. ಈ ರಸ್ತೆ ಕೆಲಸವನ್ನು ಆದಷ್ಟು ಬೇಗ ಪೂರ್ತಿ ಮಾಡುವುದಕ್ಕೆ ಯಾವುದೇ ವಿಧವಾದ ಅಡ್ಡಿ ಆಡಚಣೆಗಳು ಏನೂ ಇಲ್ಲ. ಎಲ್ಲಾ ರೀತಿಯ ಅನುಕೂಲಗಳನ್ನೂ ಹೊಂದಿದೆ. ಆದಷ್ಟು ಬೇಗ ಈ ಕೆಲಸವನ್ನು ನಾವು ಮಾಡಿಕೊಡುತ್ತೇವೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಈ ರಾಷ್ಟ್ರೀಯ ಹೆದ್ದಾರಿಗೆ ಕೇಂದ್ರ ಸರ್ಕಾರದಿಂದ ಹಣ ಮಂಜೂರು ಆಗಿದೆ, ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ ಎನ್ನುವ ವಿಚಾರ ಗೊತ್ತಾದ ಮೇಲೆ ಬಹಳ ತ್ವರಿತಗತಿಯಲ್ಲಿ ಕೆಲಸ ಆಗುತ್ತಿದೆ ಎನ್ನುವುದನ್ನು ನಾನು ತಳ್ಳಿಹಾಕುವುದಿಲ್ಲ, ಕೆಲಸ ಆಗುತ್ತಿದೆ. ಆದರೆ ಬಹಳ ಆಕ್ಸಿಡೆಂಟ್ಸ್ ಆಗುತ್ತಿರುವ ಕಡೆಗಳಲ್ಲಿ ಮಾತ್ರ ಕೆಲಸ ತ್ವರಿತಗತಿಯಲ್ಲಿ ಆಗುತ್ತಿಲ್ಲ. ಉದಾಹರಣೆಗೆ ನಲ್ಲಿಗೆರೆ ಸೇತುವೆಗೆ ಬಹಳ ಪ್ರಾಮುಖ್ಯತೆ ಕೊಡಬೇಕು. ತಾವು ಸರ್ಕಲ್ ಎಂದು ಹೇಳಿದಿರಿ, ನಾನು ಮೂರು ಸರ್ಕಲ್‌ಗಳನ್ನು ಹೇಳಿದೆ. ನೆಲಮಂಗಲ, ಬೆಳ್ಳೂರು ಮತ್ತು ಕಡಬಳ್ಳಿ ಸರ್ಕಲ್‌ಗಳಲ್ಲಿ. ಇವು ಬಹಳ ಪ್ರಮುಖವಾಗಿ ಆಗಬೇಕಾದಂತಹ ಸರ್ಕಲ್‌ಗಳು. ನಾನು ಹೇಳಿದ ಮೂರು ಸರ್ಕಲ್‌ಗಳಲ್ಲಿ ಯಾವ ಸರ್ಕಲ್ಲಿನದು ಕೇಂದ್ರ ಸರ್ಕಾರದ ಅನುಮತಿಗೆ ಹೋಗಿದೆ ಎನ್ನುವ ವಿಚಾರವನ್ನು ದಯವಾಡಿ ಮಾನ್ಯ ಮಂತ್ರಿಗಳು ತಿಳಿಸಬೇಕು ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ, ಪ್ರಾಮುಖ್ಯ–ಅತಿಪ್ರಾಮುಖ್ಯ ಎಂಬ ಪ್ರಶ್ನೆಯಿಲ್ಲ, ರಸ್ತೆ ಕೆಲಸ ಅತಿ ಪ್ರಾಮುಖ್ಯ ಎಂಬುದನ್ನು ರಾಜ್ಯ ಸರ್ಕಾರ ಮನಗಂಡು ಅದಕ್ಕೆ ತಕ್ಕುದಾದ ಕರಡು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದೆ. ತಮಗೆ ಹೇಳುವುದಾದರೆ ನೆಲಮಂಗಲ ವೃತ್ತದ ಜೊತೆಗೆ ಬೆಳ್ಳೂರು ಹತ್ತಿರದ ಒಂದು ಸೈಡ್ ಲೈನ್ ಮಾಡುವುದಕ್ಕೆ ಈಗಾಗಲೆ ಪ್ರಸ್ತಾವನೆಯಾಗಿದೆ. ಭೂಸ್ವಾಧೀನ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ತೆಗೆದುಕೊಂಡಿದ್ದಾರೆ. ಅದೆಂ ಅಂತಿಮ ನಿರ್ಣಯ ಆದ ನಂತರ ಅಲ್ಲಿ ಸರ್ಕಲ್ ಪ್ರಯತ್ನ ಮಾಡುತ್ತೇವೆ. ಇನ್ನು ತಾವು ಹೇಳಿದ ಒಂದು ಸೇತುವೆ ಕೆಲಸಕ್ಕೆ ಕೂಡ ಎಸ್ಟಿಮೇಟ್ ಮತ್ತು ಪ್ಲಾನ್ ರೆಡಿ ಮಾಡಿದ್ದಾರೆ. ಈ ಕೆಲಸವನ್ನು ನಾವು ತ್ವರಿತಗತಿಯಲ್ಲಿ ಮಾಡುತ್ತೇವೆ ಎಂದು ತಮಗೆ ತಿಳಿಸಬಯಸುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಕಡಬಳ್ಳಿ ಮತ್ತು ಬೆಳ್ಳೂರು ಸರ್ಕಲ್‌ಗಳು ನಿಮ್ಮ ಕರಡು ಯೋಜನೆಯಲ್ಲಿ ಸೇರಿವೆಯೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಲ್ಲಿ ಇರತಕ್ಕ ಎಲ್ಲಾ ಕೆಲಸಗಳು ಅಗತ್ಯ ಎಂದು ಪರಿಗಣಿಸಿದ್ದೇವೆ.

ಬಿಜಾಪುರ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳು

೬೧೬. ಶ್ರೀ ವಂಸೋಹರ ಐನಾಪುರ (ಬಿಳಿಳ್ಳಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ ?

ಅ) ಬರಗಾಲ ಪೀಡಿತ ಪ್ರದೇಶವಾದ ಬಿಜಾಪುರ ಜಿಲ್ಲೆಯಲ್ಲಿ ನೀರಾವರಿ ಯೋಜನೆ ತೆಗೆದು ಕೊಳ್ಳುವ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಘಟಪ್ರಭಾ ಮತ್ತು ಮಲಪ್ರಭಾ ಭಾರಿ ನೀರಾವರಿ ಯೋಜನೆಗಳಿಂದ ಬಿಜಾಪುರ ಜಿಲ್ಲೆಯಲ್ಲಿ ಈಗಾಗಲೇ ಕ್ರಮವಾಗಿ ೭೬,೫೬೩ ಹೆಕ್ಟೇರ್ ಮತ್ತು ೧೩,೩೧೨ ಹೆಕ್ಟೇರ್ ಪ್ರದೇಶಕ್ಕೆ